O.S. ನಂಬರಃ 78/2017

ಪಿ. ಡಬ್ಲ್ಯೂಃ 1

ದಿಃ 29-08-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ</u>

ನಾನು ಹೇಳುವ ಗೋವಿಂದ ರಾಮಯ್ಯ ಶೆಟ್ಟಿರವರ ಮರಣವಾದ ಬಗ್ಗೆ ದಾಖಲಾತಿ ನನ್ನ ಬಳಿ ಇಲ್ಲ. ಈಗ ನೋಡುತ್ತಿರುವ ನಿಪಿ-1 ದಾಖಲೆಯಲ್ಲಿ ಗೋವಿಂದ ಅನಂತ ಶೆಟ್ಟಿ ಎಂದು ಇದೆ ಎಂದರೆ ಸರಿ. ಗೊವಿಂದ ರಾಮಯ್ಯ ಶೆಟ್ಟಿರವರ ಕಡೆಯಿಂದ ವಾರಸಾ ಆಗಿ ಕಲ್ಯಾಣಿ ಮತ್ತು ನಾಗಮ್ಮ ರವರ ಹೆಸರು ಬಂದ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ ದಾಖಲೆ ನೋಡಿಲ್ಲ ಎಂದು ಹೇಳುತ್ತಾರೆ. ಗೋವಿಂದ ಅನಂತ ಶೆಟ್ಟಿರವರು 1956 ರಲ್ಲಿ ಮೃತಪಟ್ಟಿದ್ದಾರೆ ಅವರಿಗೆ ಕಲ್ಯಾಣಿ ಹಾಗೂ ನಾಗಮ್ಮ ವಾರಸುದಾರರಿರುತ್ತಾರೆ ಎಂದು 1961 ರಂದು ಮ್ಯುಟೇಷನ್ ನಂ. 2706 ಮಂಜೂರಾಗಿದೆ ಎಂದರೆ ಸರಿ. ಸದರಿ ದಾಖಲೆ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ.

ನಿಪಿ-13 ರಲ್ಲಿಯ ವಿಷಯಗಳನ್ನು ತಿಳಿದುಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಪಿ-13 ರಲ್ಲಿ ಗುಣವಂತ ಗಾಂವಕರ ರವರು ನಾಗಮ್ಮನ ಪರವಾಗಿ ಸಾಕ್ಷಿ ನುಡಿದಿರುತ್ತಾರೆಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ಸದರಿ ವಿಷಯ ನನ್ನ ತಾಯಿ

ನನಗೆ ಹೇಳಿರುತ್ತಾರೆ.  ನನ್ನ ತಂದೆ ತಾಯಿ ಬಳಿ ನಾಗಮ್ಮ ಮೊದಲಿನ ಪ್ರಕರಣದ ಕುರಿತು ಹೇಳಿದ್ದು, ಆದರೆ ಯಾವಾಗ ಹೇಳಿದ್ದಾರೆ ಎಂದು ಮಾಹಿತಿ ಇಲ್ಲ. ಆದರೆ, ಅಂದಾಜು 30–32 ವರ್ಷವಾಗಿರುತ್ತದೆ. ಸದರಿ ದಾವೆಯಲ್ಲಿ ಗೋವಿಂದ ಅನಂತ ಶೆಟ್ಟಿರವರ ಹೆಂಡತಿ ನಾಗಮ್ಮ ಹಾಗೂ ಕಲ್ಯಾಣಿ ಎಂದು ನಮೂದಿದೆ, ಆದರೆ ಗೋವಿಂದ ರಾಮಯ್ಯ ಶೆಟ್ಟಿ ಎಂದು ನಮೂದಿಲ್ಲ ಎಂದರೆ ಸರಿಯಲ್ಲ.

ಗೋವಿಂದ ರಾಮಯ್ಯ ಶೆಟ್ಟಿರವರ ಆಸ್ತಿಗೆ ಮಾತ್ರ ಮಾಗಣಿ ಮಾಡಲಾಗಿದೆ ಎಂದರೆ ಸರಿ. ದಿಃ 13–08–1986 ರಂದು ಆದ ನೋಂದಾಯಿತ ಮೃತ್ಯುಪತ್ರ ರದ್ದತ್ತಿಗೆ ದಾವೆಯಲ್ಲಿ ಮಾಗಣಿ ಮಾಡಿದ್ದಿಲ್ಲ, ಆದರೆ ಸದರಿ ಮೃತ್ಯುಪತ್ರವನ್ನು ನಾನು ನೋಡಿಲ್ಲ, ಸಾಕ್ಷಿ ನನ್ನ ಇನ್ನೊಬ್ಬ ಸಹೋದರಿಯ ಗಂಡ ಅದನ್ನೆಲ್ಲಾ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ.  ಸದರಿ ಮೃತ್ಯುಪತ್ರ ನಮ್ಮ ಪರವಾಗಿ ವಕೀಲರಿಗೆ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಮೃತ್ಯುಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಕೊಡುತ್ತೇನೆ ಎಂದು ಹೇಳುತ್ತಾರೆ. ಸದರಿ ಮೃತ್ಯುಪತ್ರ ನನ್ನ ಬಳಿ ಇದೆ.

ಗೋವಿಂದ ರಾಮಯ್ಯ ಶೆಟ್ಟಿರವರ ವಾರಸುದಾರರಿರುವುದರಿಂದ ನಮಗೂ ಹಾಗೂ ದಾವಾ ಆಸ್ತಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಲ್ಯಾಣಿ ಹಾಗೂ ನಾಗಮ್ಮಳಿಗೆ ವಾರಸುದಾರರಿಲ್ಲ ಎಂದು ತಿಳಿದು ಹೆಸರಿನ ಸಾಮ್ಯತೆ ದುರುಪಯೋಗಪಡಿಸಿಕೊಂಡು ನಿಪಿ–10 ಮ್ಯುಟೇಷನ್ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ಹಾಗೂ ಇತರರು ನೀಡಿದ ಮಾಹಿತಿ ಮೇರೆಗೆ ನಾನು ಪ್ರಕರಣ

ದಾಖಲಿಸಲು ಮಾಹಿತಿ ನೀಡಿದ್ದೇನೆ. 28 ವರ್ಷಗಳ ಹಿಂದೆ ನನ್ನ ತಂದೆ ಮೃತಪಟ್ಟಿರುತ್ತಾರೆ. ಗೊವಿಂದ ಅನಂತ ಶೆಟ್ಟಿರವರ ವಾರಸುದಾರರಿದ್ದರೆ ಆವಾಗಲೇ ನನ್ನ ತಂದೆ ಪ್ರಕರಣ ದಾಖಲಿಸುತ್ತಿದ್ದ, ಆದರೆ, ಗೋವಿಂದ ರಾಮಯ್ಯ ಶೆಟ್ಟಿರವರ ವಾರಸುದಾರರಿರುವುದರಿಂದ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ.

ದಿಃ 13-08-1986 ರ ಮೃತ್ಯುಪತ್ರ ಮಾಡುವಾಗ ಮತ್ತು ನೋಂದಾಯಿಸುವಾಗ ನಾಗಮ್ಮಳಿಗೆ ಎಷ್ಟು ವಯಸ್ಸಾಗಿತ್ತು ಎಂದು ಮಾಹಿತಿ ಇಲ್ಲ. ಸದರಿ ಮೃತ್ಯುಪತ್ರದಲ್ಲಿ ತನಗೆ ಮಕ್ಕಳಿಲ್ಲ ಎಂದು ನಾಗಮ್ಮ ಸ್ಪಷ್ಟವಾಗಿ ಬರೆದಿದ್ದಾರೆ ಎಂದರೆ ಸುಳ್ಳಾಗಿ ಬರೆಸಿರಬಹುದು ಎಂದು ಹೇಳುತ್ತಾರೆ. ನನ್ನ ತಂದೆ ಮಗನಾಗಿ ನಾಗಮ್ಮಳನ್ನು ಸರಿಯಾಗಿ ನೋಡಿಕೊಂಡಿದ್ದರೆ ಬೇರೊಬ್ಬರಿಗೆ ಮೃತ್ಯುಪತ್ರ ಮಾಡುವ ಪ್ರಸಂಗ ಅಥವಾ ಪ್ರಕರಣ ದಾಖಲಿಸಲು ಜಿಪಿಎ ಕೊಡುವ ಪ್ರಸಂಗ ಉದ್ಭವಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಗೋವಿಂದ ಅನಂತ ಶೆಟ್ಟಿರವರ ಮಗನೇ ಅಲ್ಲ, ಕಾರಣ ನಾಗಮ್ಮ ಮತ್ತು ಕಲ್ಯಾಣಿ ವಾರಸುದಾರನಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಗೋವಿಂದ ಅನಂತ ಶೆಟ್ಟಿರವರ ಮಗನಲ್ಲದಿರುವುದರಿಂದ ದಾವಾಸ್ತಿಗಳಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಹಾಕಿರುವ ಉದಾರಣೆ ಓದಿದ್ದೇನೆ. ದಾವಾಸ್ತಿ ಗೋವಿಂದ ಅನಂತ ಶೆಟ್ಟಿರವರಿಗೆ ಸಂಬಂಧಪಟ್ಟಿರುತ್ತದೆ ಹೊರತು ಗೋವಿಂದ ರಾಮಯ್ಯ ಶೆಟ್ಟಿರವರಿಗೆ ಸಂಬಂಧಪಟ್ಟಿಲ್ಲ ಎಂದು ಬರೆದಿದ್ದಾರೆ ಎಂದರೆ ಸರಿ. ದಾವಾ ಜಮೀನುಗಳ ಕುರಿತು ಭೂ

ನ್ಯಾಯ ಮಂಡಳಿಗೆ ನನ್ನ ತಂದೆ ಹಾಜರಾದ ಬಗ್ಗೆ ಯಾವುದೇ ದಾಖಲೆ ಇಲ್ಲ. ಸುಳ್ಳು ದಾವೆ ಮಾಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.